ನಗರ ಪ್ರದೇಶದಲ್ಲಿ ಮನೆಗಳ ನಿರ್ಮಾಣದ ಬಗ್ಗೆ

೬೭೨. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಗರಸಭೆ ಹಾಗೂ ಪುರಸಭೆಗಳ ವ್ಯಾಪ್ತಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಭಾಗ್ಯಮಂದಿರ ಯೋಜನೆ, ನಿಜವೇ ?

ಆ) ಹಾಗಿದ್ದಲ್ಲಿ ಇದರಿಂದ ದುರ್ಬಲವರ್ಗದವರಿಗೆ ಸಾಕಷ್ಟು ಮನೆಗಳನ್ನು ನಿರ್ಮಿಸಿ ಕೊಡಲು ನಗರಸಭೆಗಳಿಗೆ ಸಾಧ್ಯವಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ನಗರ ಪ್ರದೇಶದಲ್ಲಿಯ ದುರ್ಬಲ ವರ್ಗದ ಜನರಿಗೆ ಅನುಕೂಲ ಮಾಡಿಕೊಡಲು ಯಾವುದಾದರೂ 'ಗೃಹ ನಿರ್ಮಾಣ ಯೋಜನೆ'ಯನ್ನು ಸರ್ಕಾರದವರು ರೂಪಿಸಿದ್ದಾರೆಯೇ ?

ಈ) ಹಾಗಿದ್ದಲ್ಲಿ ಆ ಯೋಜನೆಯ ರೂಪ ರೇಷೆಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.

ಇ) ಹೌದು ರೂಪಿಸಿದೆ.

೧) ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಮಂತ್ರು

೨) ಕರ್ನಾಟಕ ಕೊಳಚೆ ನಿವರ್ಮೂಲನಾ ಮಂಡಳಿಗಳು ಹುಡ್ಕೋ ನೆರವಿನಿಂದ ಮನೆಗಳನ್ನು ಕಟ್ಟಿಸುತ್ತಿವೆ.

ಈ) ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಹುಡ್ಕೋ ನೆರವಿನಿಂದ ಆರ್ಥಿಕ ದುರ್ಬಲ ವರ್ಗದ ಮತ್ತು ಅಲ್ಪ ಆದಾಯ ವರ್ಗದವರಿಗಾಗಿ ೧೫,೦೦೦ ಮತ್ತು ೩೦,೦೦೦ ರೂ.ಗಳ ಆದಾಯ ವೆಚ್ಚದಲ್ಲಿ ಮನೆಗಳನ್ನು ಕಟ್ಟಲಾಗುತ್ತಿದ್ದು, ಅವುಗಳಲ್ಲಿ ಪ್ರತಿ ಮನೆಗೆ ಕ್ರಮವಾಗಿ ರೂ. ೧೩,೫೦೦ ಮತ್ತು ೨೪,೫೦೦ ರೂ.ಗಳ ನೆರವು ಸಿಗುತ್ತದೆ ಮತ್ತು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಸಹಾ ನಗರ ಪ್ರದೇಶಗಳಲ್ಲಿ ಕೊಳಚೆ ನಿವಾಸಿಗಳಿಗೆ ವಸತಿಗೃಹಗಳನ್ನು ಕಟ್ಟುತ್ತಿದೆ. ಆವಶ್ಯಕತೆ ಇದ್ದಕಡೆ ಮಾತ್ರ ಕಟ್ಟಲಾಗುತ್ತಿದೆ. ಸುಮಾರು ಪ್ರತಿ ಮನೆಗೆ ತಗಲಬಹುದಾದ ಅಂದಾಜು ವೆಚ್ಚ ೧೨,೦೦೦ ರೂ.ಗಳು ಹುಡ್ಕೋ ಸಂಸ್ಥೆಯ ಸಹಾಯದಿಂದ ಕಟ್ಟಿದ ಮನೆಗಳಿಗೆ ಶೇಕಡಾ ೮೦ ಭಾಗದ ಹಣವನ್ನು ಹುಡ್ಕೋವೇ ಭರಿಸುತ್ತಿದೆ. ಉಳಿದ ಶೇಕಡಾ ೨೦ ಭಾಗದ ಹಣವನ್ನು ರಾಜ್ಯ ಸರ್ಕಾರದಿಂದ ಕೊಡಲಾಗುತ್ತಿದೆ.

ರಾಜ್ಯದ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳು

೬೦೧. ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲ್).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೫-೮೬, ೧೯೮೬-೮೭ನೇ ಸಾಲಿನಲ್ಲಿ ಉಚ್ಚ ಹಾಗೂ ಇತರೆ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳೆಷ್ಟು ?

ಆ) ೧೯೮೫-೮೬, ೧೯೮೬-೮೭ನೇ ಸಾಲಿನಲ್ಲಿ ಉಚಿತ ಕಾನೂನು ನೆರವು ಮಂಡಳಿಗೆ ಒಪ್ಪಿಸಿದ್ದ ಮೊಕದ್ದಮೆಗಳ ಶೇಕಡವಾರು ಸಂಖ್ಯೆ ಎಷ್ಟು ?

ಇ) ಸದರಿ ಮೊಕದ್ದಮೆಗಳ ತೀರ್ಪಾಗಿದೆಯೇ ?

ಈ) ಲೋಕ ಅದಾಲತ್ ತೀರ್ಪಿತ್ತ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

I (i) ದಿನಾಂಕ ೩೧-೧೨-೧೯೮೫ಕ್ಕೆ ಉಚ್ಚನ್ಯಾಯಾಲಯದಲ್ಲಿ ತೀರ್ಮಾನವಾಗದ ಮೊಕದ್ದಮೆಗಳ ಸಂಖ್ಯೆ ೮೭,೬೦೮.

(ii) ದಿನಾಂಕ ೩೧ ೧೨-೧೯೮೬ಕ್ಕೆ ಉಚ್ಚನ್ಯಾಯಾಲಯದಲ್ಲಿ ತೀರ್ಮಾನವಾದ ಮೊಕದ್ದಮೆಗಳ ಸಂಖ್ಯೆ ೬೬,೪೧೪.

II (i) ದಿನಾಂಕ ೩೧-೧೨-೧೯೮೫ಕ್ಕೆ ಅಧೀನ ನ್ಯಾಯಾಲಯಗಳಲ್ಲಿ ತೀರ್ಮಾನವಾಗದ ಮೊಕದ್ದಮೆಗಳ ಸಂಖ್ಯೆ ೯;೬೯ ೨೪೦

(ii) ದಿನಾಂಕ ೩೦-೬-೧೯೮೬ಕ್ಕೆ ಅಧೀನ ನ್ಯಾಯಾಲಯಗಳಲ್ಲಿ ತೀರ್ಮಾನವಾಗದ ಮೊಕದ್ದಮೆಗಳು ೯,೬೦,೩೧೯.

ಟಿಪ್ಪಣಿ — ಸಂಚಿತ ಅಂಕಿಗಳನ್ನಾಧರಿಸಿ ಅಂಕಿ ಅಂಶಗಳನ್ನು ನೀಡುವುದಕ್ಕೆ ಸಮಯ ಬೇಕಾಗಿರುವುದರಿಂದ ದಿನಾಂಕ ೩೧-೧೨-೧೯೮೬ರಂದು ಅಧೀನ ನ್ಯಾಯಾಲಯಗಳಲ್ಲಿ ತೀರ್ಮಾನವಾಗದ ಮೊಕದ್ದಮೆಗಳ ಸಂಖ್ಯೆಗೆ ಸಂಬಂಧಪಟ್ಟ ಮಾಹಿತಿಯು ತತ್‌ಕ್ಷಣ ಲಭ್ಯವಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯವು ತಿಳಿಸಿದೆ.

ಆ) ಕರ್ನಾಟಕ ಉಚ್ಚನ್ಯಾಯಾಲಯವು ಕರ್ನಾಟಕ ಕಾನೂನು ನೆರವು ಮಂಡಳಿಗೆ ಯಾವುದೇ ಪ್ರಕರಣಗಳನ್ನು ವಹಿಸಿಲ್ಲ.

೧೯೮೫-೮೬ರ ಅವಧಿಯಲ್ಲಿ ಕರ್ನಾಟಕ ಕಾನೂನು ನೆರವು ಮಂಡಳಿಯು ಕಾನೂನು ನೆರವಿಗಾಗಿ ೭೮೧೮ ಅರ್ಜಿಗಳನ್ನು ಸ್ವೀಕರಿಸಿತು. ಆ ಪೈಕಿ, ೬೧೨೧ ಪ್ರಕರಣಗಳಲ್ಲಿ ಕಾನೂನು ನೆರವನ್ನು ನೀಡಲಾಯಿತು. (ಶೇ.೭೬).

೧೯೮೬-೮೭ರ ಅವಧಿಯಲ್ಲಿ ಮಂಡಲಿಯು ಕಾನೂನು ನೆರವಿಗಾಗಿ ೧೧,೨೮೪ ಅರ್ಜಿಗಳನು ಸ್ವೀಕರಿಸಿದ್ದು. ಆ ಪೈಕಿ, ೯,೯೧೦ ಪ್ರಕರಣಗಳಲ್ಲಿ ಕಾನೂನು ನೆರವನ್ನು ನೀಡಲಾಯಿತು. (ಶೇ.೮೬).

ಇ) ೩೧-೧೨-೧೯೮೫ರ ಅವಧಿಯ ಅಂತ್ಯಕ್ಕೆ ೧೯೬೭ ಕಾನೂನು ನೆರವು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

೩೧-೧೨-೧೯೮೬ರ ಅವಧಿಯ ಅಂತ್ಯಕ್ಕೆ ೧,೪೩೨ ಕಾನೂನು ನೆರವು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

ಈ) ೧,೬೫೩ ಪ್ರಕರಣಗಳು.

ಕಿರು ನೀರು ಯೋಜನೆ ಮತ್ತು ಕೊಳವೆ ಬಾವಿಗಳ ನಿರ್ವಹಣೆ ಬಗ್ಗೆ

೬೪೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) —ಮಾನ್ಯ ಗ್ರಾಮೀಣಾಭಿವೃದ್ಧಿ, ಪಸಕಿ ಮತ್ತು ಪಕ್ಷ್ಸ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಕಾರ್ಯನಿರ್ವಹಣೆ ಪ್ರಾರಂಭವಾದ ನಂತರ, ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಕಿರು ನೀರು ಯೋಜನೆ ಮತ್ತು ಕೊಳವೆ ಬಾವಿಗಳ ನಿರ್ವಹಣೆಗಾಗಿ ಯಾವ ರೀತಿಯ ಕ್ರಮವನ್ನು ತಗೆದುಕೊಂಡಿದ್ದೀರಿ ?

ಆ) ಸರ್ಕಾರವು ಯಾವುದೇ ರೀತಿಯ ಮೆಶಿನರಿಯನ್ನು ದುರಸ್ತಿ ಕ್ರಮಕ್ಕಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗೆ ವಹಿಸಿದೆಯೇ ?